# ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ವಿಭಾಗ) ಧನ್ನೂರ ತಾ.ಹುನಗುಂದ ಜಿ.ಬಾಗಲಕೋಟ

## ಸೇತುಬಂಧ ಪರೀಕ್ಷೆ (ಸಾಫಲ್ಯ ಪರೀಕ್ಷೆ) – 2025-26

ವರ್ಗ: 10　　　　ವಿಷಯ: ಕನ್ನಡ　　　　ದಿನಾಂಕ: -06-2025

| ವಿದ್ಯಾರ್ಥಿ/ನಿ ಹೆಸರು : | | ಹಾಜರಿ ಸಂಖ್ಯೆ : |
|---|---|---|
| ಒಟ್ಟು ಎ ಶ್ರೇಣಿ : | ಒಟ್ಟು ಬಿ ಶ್ರೇಣಿ : | ಮೌಲ್ಯಮಾಪಕರ ಸಹಿ : |

*** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ　ಎ) 49　ಬಿ) 13　ಸಿ) 5　ಡಿ) 25　**ಉತ್ತರ :** ____________

2) 'ಅನ್ವರ್ಥನಾಮ' ಪದಕ್ಕೆ ಉದಾಹರಣೆ　ಎ) ಕುರುಡ　ಬಿ) ಬೆಟ್ಟ　ಸಿ) ತಾವು　ಡಿ) ಮಹೇಶ　**ಉತ್ತರ :** ____________

3) ಸೂರ್ಯೋದಯ ಇದು ಯಾವ ಸಂಧಿಯಾಗಿದೆ? ಎ)ಲೋಪಸಂಧಿ ಬಿ)ಆದೇಶಸಂಧಿ ಸಿ)ಗುಣಸಂಧಿ ಡಿ)ವೃದ್ಧಿ　**ಉತ್ತರ :** ____________

4) ನಾನು–ನಾವು ಇವು ಈ ಪುರುಷವಾಚಕ ಸರ್ವನಾಮಗಳು　**ಉತ್ತರ :** ____________

ಎ) ಉತ್ತಮಪುರುಷ　ಬಿ) ಮಧ್ಯಮಪುರುಷ　ಸಿ) ಪ್ರಥಮಪುರುಷ　ಡಿ) ಯಾವುದೂ ಅಲ್ಲ.

5) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ. – ಈ ವಾಕ್ಯ ಯಾವ ಕಾಲದಲ್ಲಿದೆ?　**ಉತ್ತರ :** ____________

ಎ) ಭೂತಕಾಲ　ಬಿ) ವರ್ತಮಾನಕಾಲ　ಸಿ) ಭವಿಷ್ಯತ್ ಕಾಲ　ಡಿ) ಯಾವುದೂ ಅಲ್ಲ

6) 'ನೋಡು' ಧಾತುವಿನ ನಿಷೇದಾರ್ಥಕ ರೂಪ ಎ)ನೋಡಲಿ　ಬಿ)ನೋಡಿಯಾನು ಸಿ)ನೋಡುವನು ಡಿ)ನೋಡನು　**ಉತ್ತರ :** ____________

7) ಗುರು – ಲಘು ಮೂರಿರೆ　ಎ) ಮ–ನ ಗಣ　ಬಿ) ಭ–ಯ ಗಣ　ಸಿ) ಜ–ರ ಗಣ　ಡಿ) ಸ–ತ ಗಣ　**ಉತ್ತರ :** ____________

8) ಸಪ್ತಮಿ ವಿಭಕ್ತಿ ಪ್ರತ್ಯಯ　ಎ) ಅನ್ನು　ಬಿ) ಅಲ್ಲಿ　ಸಿ) ಇಂದ　ಡಿ) ಅ　**ಉತ್ತರ :** ____________

9) ಪಶ್ಚಿಮ ಘಟ್ಟದಲ್ಲಿ ಹಲವು ವಿಶೇಷ ಮರಗಳಿವೆ. ದಿಗ್ವಾಚಕ ಪದ ಎ) ಹಲವು ಬಿ) ವಿಶೇಷ ಸಿ)ಪಶ್ಚಿಮ ಡಿ) ಮರ　**ಉತ್ತರ :** ____________

10) ವಿಷಕಂಠ – ಈ ಪದ ಯಾವ ಸಮಾಸಕ್ಕೆ ಉದಾಹರಣೆ　**ಉತ್ತರ :** ____________

ಎ) ತತ್ಪುರುಷ ಸಮಾಸ　ಬಿ) ದ್ವಿಗು ಸಮಾಸ　ಸಿ) ಬಹುವ್ರೀಹಿ ಸಮಾಸ　ಡಿ) ಕ್ರಿಯಾ ಸಮಾಸ

**11. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಜನಪದ ನೃತ್ಯಗಳು ಕರ್ನಾಟಕದಾದ್ಯಂತ ಪ್ರಚಲಿತವಿದ್ದು, ನಲವತ್ತಕ್ಕೂ ಹೆಚ್ಚು ಪ್ರಕಾರಗಳು ರೂಢಿಯಲ್ಲಿವೆ. ಅಂತಹ ನೃತ್ಯಗಳಲ್ಲಿ 'ವೀರಗಾಸೆ' ಸಹ ಒಂದಾಗಿದೆ. ವೀರಗಾಸೆ ಲೈವ ಸಂಪ್ರದಾಯದ ಧಾರ್ಮಿಕ ವೀರ ನೃತ್ಯ. ಇದು ಸಾಮೂಹಿಕ ನೃತ್ಯವನ್ನು ಒಳಗೊಂಡ ಕರ್ನಾಟಕದ ವಿಶಿಷ್ಟ ಜನಪದ ಕಲೆ. ಈ ನೃತ್ಯದಲ್ಲಿ ಇಬ್ಬರಿಂದ ಮೂವತ್ತು ಮಂದಿ ಭಾಗವಹಿಸುತ್ತಾರೆ. ಇದರಲ್ಲಿ ಪಂಚವಾದ್ಯಗಳಾದ ತಾಳ, ಶ್ರುತಿ, ಚಮಾಳ, ಓಲಗ ಹಾಗೂ ಕರಡೆ ಬಳಕೆಯಾಗುತ್ತವೆ. 'ಅಹಹ ರುದ್ರಾ, ಅಹಹಾ ದೇವಾ' ಎಂದು ನರ್ತಕನು ಹೇಳುವ ಒಡಪಿನೊಂದಿಗೆ ವೀರಗಾಸೆಯ ಕುಣಿತವು ಪ್ರಾರಂಭವಾಗುತ್ತದೆ. ಈ ಒಡಪಿನಲ್ಲಿ ವೀರಭದ್ರ ದೇವರು ಹುಟ್ಟಿದ ಸಂದರ್ಭದ ವರ್ಣನೆ ಇರುತ್ತದೆ. ಚಮಾಳ ಹಾಗೂ ಕರಡೆಯ ಬಡಿತ ವೀರಗಾಸೆಯ ಕುಣಿತಕ್ಕೆ ಸ್ಫೂರ್ತಿ ನೀಡುತ್ತವೆ. ನಾಲ್ಕೈದು ಗತಿಗಳಲ್ಲಿ ಇರುವ ವೀರಗಾಸೆಯ ಕುಣಿತದಲ್ಲಿ ಒಂದೊಂದು ಗತಿಯ ಕುಣಿತದ ಅನಂತರ ಮತ್ತೊಬ್ಬ ನರ್ತಕ ಒಡಪು ಹೇಳುತ್ತಾನೆ. ಗತಿಯಿಂದ ಗತಿಗೆ ಕುಣಿತ ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ.

**ಪ್ರಶ್ನೆಗಳು:**

* ವೀರಗಾಸೆಯು ಯಾವ ಸಂಪ್ರದಾಯಕ್ಕೆ ಸೇರಿದ ನೃತ್ಯವಾಗಿದೆ? **ಉತ್ತರ :** ______________________________

*. ವೀರಗಾಸೆಯಲ್ಲಿ ಬಳಸುವ ಪಂಚವಾದ್ಯಗಳು ಯಾವುವು?　**ಉತ್ತರ :** ______________________________

**12. ಕೊಟ್ಟಿರುವ ಪದ್ಯಭಾಗಕ್ಕೆ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಭರತಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗಳೆ
ಭರತಚಕ್ರೇಶ್ವರ ಸುಖಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು

**ಉತ್ತರ:**______________________________________________________________

______________________________________________________________

______________________________________________________________

______________________________________________________________

______________________________________________________________

**13. ಕೊಟ್ಟಿರುವ ವ್ಯಂಜನಾಕ್ಷರಗಳಿಗೆ ಸ್ವರ ಸೇರಿಸಿ ಪದ ರಚಿಸಿ ಬರೆಯಿರಿ.**

* ಕ್+ಅ+ನ್+ನ್+ಅ+ಡ್+ಅ = ________________　　* ಸ್+ಅ+ಂ+ಪ್+ಅ+ತ್+ತ್+ಉ = ________________

**14. ಕೊಟ್ಟಿರುವ ಸಂಯುಕ್ತಾಕ್ಷರಗಳಲ್ಲಿ ಸಜಾತಿ ಸಂಯುಕ್ತಾಕ್ಷರ ಮತ್ತು ವಿಜಾತಿ ಸಂಯುಕ್ತಾಕ್ಷಗಳಾವುವು ಹೆಸರಿಸಿರಿ.**

* ಅದ್ಭುತ – ____________　　* ಲೆಕ್ಕಾಚಾರ : ____________

* ಮೆಚ್ಚುಗೆ – ____________　　* ವ್ಯಕ್ತಿತ್ವ – ____________

**15. ಕೊಟ್ಟಿರುವ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಪದಗಳನ್ನು ಪುನಃ ತಪ್ಪಿಲ್ಲದೇ ಬರೆಯಿರಿ.**

* ಕೆಂಡಕಾರು　**ಉತ್ತರ:**__________________　　* ಕನ್ನಡಿಯೊಳಗಿನ ಗಂಟು　**ಉತ್ತರ:**__________________

* ಕಪಿಮುಷ್ಠಿ　**ಉತ್ತರ:**__________________　　* ಮೂಗಿನ ಮೇಲೆ ಬೆರಳಿಡು　**ಉತ್ತರ:**__________________

**16. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

* ಸಂವಾದ :____________________
* ಕೈಹಿಡಿ :____________________

**17. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

ಕನ್ನಡದ ನುಡಿಕಿವಿಗೆ ಮಧುರವು

ಕನ್ನಡದ ನುಡಿ ಮಧುರ ಜೇನವು

ಕನ್ನಡದ ಸಿರಿ ಸೊಬಗ ವರ್ಣಿಪರಾರು ಲೋಕದಲಿ

ಛಂದಸ್ಸಿನ ಹೆಸರು : ____________________

**18. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿರಿ.**

**ಮಗುವಿನ ಮುಖ ಪೂರ್ಣಚಂದ್ರನಂತೆ ಸುಂದರವಾಗಿದೆ.**

*ಉಪಮೇಯ __________ *ಉಪಮಾನ : __________ * ಉಪಮಾವಾಚಕ: __________ *ಸಮಾನ ಧರ್ಮ: __________

* ಅಲಂಕಾರ : _______________

*ಸಮನ್ವಯ:____________________

* ಲಕ್ಷಣ:____________________

**19. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** .

* ಹಾಸಿಗೆ ಇದ್ದಷ್ಟು ಕಾಲುಚಾಚು * ಅತಿಯಾಸೆ ಗತಿಗೇಡು * ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಿ

**ಉತ್ತರ:**____________________

**20. ನೀವು ಶಿವಮೊಗ್ಗ ಸರಕಾರಿ ಪ್ರೌಢ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ಅವಿನಾಶ/ಅರ್ಪಿತಾ ಎಂದು ಭಾವಿಸಿ ನಿಮ್ಮ ವಿದ್ಯಾಭ್ಯಾಸದ ಪ್ರಗತಿ ಕುರಿತು ಹಾವೇರಿಯಲ್ಲಿ ವಾಸವಾಗಿರುವ ನಿಮ್ಮ ತಂದೆ ಮಹೇಶಕುಮಾರ ಅವರಿಗೊಂದು ಪತ್ರ ಬರೆಯಿರಿ. ಅಥವಾ**

**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

* ಪರಿಸರ * ಗ್ರಂಥಾಲಯ * ರಾಷ್ಟ್ರೀಯ ಭಾವೈಕ್ಯತೆ

**ಉತ್ತರ:**____________________